ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2818/2019

ಚಾಸಾ:7 ಪ್ರಾಸಾ:6

ದಿನಾಂಕ: 09.12.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಕೇಶವ |
| ತಂದೆಯ ಹೆಸರು | : | ಬಾಬು |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಗಾರೆ ಕೆಲಸ |
| ವಾಸ ಸ್ಥಳ | : | ವಕ್ವಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ದಿ: 12-09-2019ರಂದು ಚಾಸಾ-1 ರವರ ಮನೆಗೆ ಪೊಲೀಸರು ನನ್ನನ್ನು ಕರೆದುಕೊಂಡು ಹೋಗಿದ್ದು ಚಾಸಾ-6 ರವರು ಹಾಜರು ಇದ್ದು, ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ 9-30 ರಿಂದ 10-45ರವರೆಗೂ ಪಂಚನಾಮೆ ಜರುಗಿಸಿ ನಕ್ಷೆ ತಯಾರಿಸಿರುತ್ತಾರೆ. ಅದೇ ದಿನ ಚಾಸಾ-1 ರವರ ಗಂಡನ ಮನೆಯಲ್ಲಿ ಪಂಚನಾಮೆಯನ್ನು 11 ರಿಂದ 11-30ರವರೆಗೂ ಜರುಗಿಸಿರುತ್ತಾರೆ. ಗುಲ್ವಾಡಿಯ ಉದಯನಗರ ಜಂಕ್ಷನ್ ನ ಬಳಿ ಸರ್ಕಲ್ ನಲ್ಲಿ ಚಾಸಾ-1 ರವರು ತೋರಿಸಿದ ಜಾಗದಲ್ಲಿ ಪಂಚನಾಮೆಯನ್ನು 12 ರಿಂದ 12-30ರವರೆಗೂ ಜರುಗಿಸಿರುತ್ತಾರೆ.

ದಿ: 22-09-2019 ರಂದು ಠಾಣೆಗೆ ಬರಮಾಡಿಕೊಂಡು ಮದುವೆ ಆಮಂತ್ರಣ ಪತ್ರಿಕೆ ಮತ್ತು ಪೋಟೋವನ್ನು ವಶಕ್ಕೆ ಪಡೆದಾಗ ನಾನು ಮತ್ತು ಚಾಸಾ-6 ರವರು ಹಾಜರು ಇದ್ದು, ಪಂಚನಾಮೆಯನ್ನು 10-30 ರಿಂದ 11-30ರವರೆಗೂ ಜರುಗಿಸಿರುತ್ತಾರೆ.

ದಿ: 02-10-2019 ರಂದು ಬೆಳಗಾವಿಯಲ್ಲಿರುವ 1ನೇ ಆರೋಪಿ ಉಳಿದಿದ್ದ ಮನೆಯನ್ನು ಚಾಸಾ-1ರವರು ತೋರಿಸಿದ್ದು, ಪಂಚನಾಮೆಯನ್ನು ಬೆಳಗ್ಗೆ 10 ರಿಂದ 11 ರವರೆಗೂ ಜರುಗಿಸಿ ನಕ್ಷೆ ತಯಾರಿಸಿ ಪೋಟೋ ತೆಗೆದಿರುತ್ತಾರೆ.

ಸಾಕ್ಷಿ ನಿಪಿ-2, 3, 5, 7 ರಿಂದ 10 ರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ-2(ಸಿ), 3(ಸಿ), 5(ಸಿ), 7(ಸಿ), 8(ಸಿ), 9(ಬಿ), 10(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-4, 6, 11 ರಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-12 ಮತ್ತು 13ನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಬಿ ಆರ್ ಎನ್ ರವರಿಂದಃ</u>**

ನಾನು ಚಾಸಾ-2 ರವರ ತಮ್ಮ. ಚಾಸಾ-6 ರವರು ಆತನ ಸ್ನೇಹಿತ. ಚಾಸಾ-6ರವರು ಚಾಸಾ-2 ಮತ್ತು ಅವರ ಕುಟುಂಬದವರ ಆತ್ಮೀಯರು ಎಂದರೆ ಸರಿ. ಹೆಮ್ಮಾಡಿಯಲ್ಲಿ ಚಾಸಾ-1 ರವರ ಮನೆಯ ಅಕ್ಕಪಕ್ಕದಲ್ಲಿ ಮನೆಗಳು ಇದ್ದವು ಎಂದರೆ ಸರಿ. ನನ್ನ ಮನೆ ಬಗ್ವಾಡಿಯಲ್ಲಿ ಇರುತ್ತದೆ. ಅಲ್ಲಿಂದ ಘಟನಾ ಸ್ಥಳ 2ವರೆ ಕಿ.ಮೀ ದೂರವಿರುತ್ತದೆ. ಚಾಸಾ-6 ರವರ ಮನೆ ಅರ್ಧ ಕಿ.ಮೀ ದೂರದಲ್ಲಿ ಇರುತ್ತದೆ. ಸ್ಥಳಕ್ಕೆ ಬರಬೇಕೆಂದು ಪೊಲೀಸರು ತಿಳಿಸಿರುತ್ತಾರೆ. ಸುತ್ತಮುತ್ತಲಿನವರನ್ನು ವಿಚಾರಿಸಿ ಸಹಿ ಪಡೆದಿಲ್ಲ. ಯಾವ ಯಾವ ಪಂಚನಾಮೆಯಲ್ಲಿ ಏನೆಲ್ಲಾ ಬರೆದಿದೆ ಎಂದು ನಿಖರವಾಗಿ ಹೇಳಲು ನೆನಪಿಲ್ಲ.

ಚಾಸಾ-1 ರವರಿಗೆ ಈಗ ವಿವಾಹ ವಿಚ್ಛೇಧನವಾಗಿದೆ ಎಂದರೆ ಸರಿ. ಪರಸ್ಪರ ಒಪ್ಪಿಗೆ ಮೇರೆಗೆ ವಿಚ್ಛೇಧನ ಪಡೆದಿರುತ್ತಾರೆ ಎಂದರೆ ಸರಿ. ಬೆಳಗಾವಿಯಲ್ಲಿ ಪಂಚನಾಮೆ ಜರುಗಿಸಿದ ಮನೆ ಯಾರಿಗೆ ಸಂಬಂಧಿಸಿದ್ದು ಎಂದು ತಿಳಿದಿಲ್ಲ. ಚಾಸಾ-8 ರವರೊಂದಿಗೆ ಬೆಳಗಾವಿಗೆ ವಾಹನದಲ್ಲಿ ಹೋಗಿರುತ್ತೇವೆ. ಅಲ್ಲಿ ಚಾಸಾ1 ರವರು ವಾಸವಾಗಿದ್ದ ಬಗ್ಗೆ ಯಾವುದೇ ದೃಡಪತ್ರ ಪಡೆದಿಲ್ಲ. ಅದಕ್ಕೂ ಮೊದಲು ನಾನು ಸದ್ರಿ ಸ್ಥಳಕ್ಕೆ ಭೇಟಿ ನೀಡಿಲ್ಲ. ಸದ್ರಿ ಸ್ಥಳದಲ್ಲೂ ಅಕ್ಕಪಕ್ಕದವರ ಸಹಿ ಪಡೆದಿಲ್ಲ. ಕುಂದಾಪುರ ಠಾಣೆಗೆ ಒಂದು ಬಾರಿ ಹೋಗಿರುತ್ತೇನೆ. ಮೇಲೆ ಗುರುತಿಸಿದ ಎಲ್ಲಾ ದಾಖಲೆಗಳಿಗೆ ಸಹಿಯನ್ನು ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ಒಟ್ಟು ಎಷ್ಟು ಸಹಿಗಳನ್ನು ಮಾಡಿರುತ್ತೇನೆ ಎಂದು ನೆನಪಿಲ್ಲ. ದಾಖಲೆಗಳು ಎಷ್ಟು ಪುಟಗಳಿವೆ ಹಾಗೂ ಅದರಲ್ಲಿ ಏನು ಬರೆದಿದೆ ಎಂದು ನೆನಪಿಲ್ಲ.

ಪೋಟೋಗಳಲ್ಲಿ ಸೂಚಿಸಿದಂತಹ ಮನೆಗಳ ಹೆಸರು ಕಂಡು ಬರುವುದಿಲ್ಲ. ಬೆಳಗಾವಿಯಲ್ಲಿ ತೆಗೆದ ಪೋಟೋ ಸದ್ರಿ ಜಾಗದಲ್ಲಿ ತೆಗೆದದ್ದು ಎಂದು ಕಂಡು ಬರುವುದಿಲ್ಲ ಎಂದರೆ ಸರಿ. ಅನುಕೂಲತೆಗೆ ತಕ್ಕಂತೆ ಬೇರೆ ಬೇರೆ ಜಾಗಗಳಲ್ಲಿ ಪೋಟೋ ತೆಗೆದು ಕಡತಕ್ಕೆ ಅಳವಡಿಸಿದ್ದು ಎಂದರೆ ಸರಿಯಲ್ಲ. ಹೆಮ್ಮಾಡಿ ಅಥವಾ ಬೆಳಗಾವಿಯಲ್ಲಿ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದಿಲ್ಲ. ನಾನು

ಚಾಸಾ-1 ರವರ ಕುಟುಂಬದವರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**